ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/04/ಇಸಿಎಸ್(1)/2025

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001
ದೂ.ಸಂ:080-22200777
E-mail: dte.commissioner@gmail.com
ದಿನಾಂಕ: 30.05.2025

## ಸುತ್ತೋಲೆ

ವಿಷಯ : C-20 ಪಠ್ಯಕ್ರಮದ 1/2/3/4/5 ನೇ ಸೆಮಿಸ್ಟರ್ ನ CIE (CONTINUOUS INTERNAL EVALUATION) Makeup ಕಿರುಪರೀಕ್ಷೆ (CIE) & (SEE) ಗಳಿಗೆ ಶುಲ್ಕ ಪಾವತಿಸಿ ನೋಂದಾಯಿಸಿಕೊಳ್ಳಲು ದಿನಾಂಕ ವಿಸ್ತರಿಸುವ ಬಗ್ಗೆ.

ಉಲ್ಲೇಖ : ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/04/ಇಸಿಎಸ್(1)/2025 ದಿ: 08.05.2025

*-*-*-*

ಮೇಲ್ಕಂಡ ವಿಷಯ ಮತ್ತು ಉಲ್ಲೇಖದನ್ವಯ 1 ರಿಂದ 5ನೇ ಸೆಮಿಸ್ಟರ್ C-20 ಪಠ್ಯಕ್ರಮದಲ್ಲಿ 2020-21, 2021-22, 2022-23, 2023-24 ಹಾಗೂ 2024-25ನೇ ಶೈಕ್ಷಣಿಕ ಸಾಲುಗಳಲ್ಲಿ ಶೇಕಡಾ 40 ಕ್ಕಿಂತ ಕಡಿಮೆ CIE ಅಂಕ ಗಳಿಸಿರುವ Not Eligible (NE Students) ವಿದ್ಯಾರ್ಥಿಗಳಿಗೆ CIE ಅಂಕಗಳನ್ನು Improve ಗೊಳಿಸುವ ಸಂಬಂಧ ಜೂನ್ 2025 Makeup ಕಿರುಪರೀಕ್ಷೆ (CIE) ಗಳಿಗೆ ನೋಂದಾಯಿಸುವ ವಿದ್ಯಾರ್ಥಿಗಳಿಂದ "June-2025 Makeup Exam" ಅರ್ಜಿ ನಮೂನೆಯೊಂದಿಗೆ ದಿನಾಂಕ:26.05.2025ರವರೆಗೆ ಪರೀಕ್ಷಾ ಶುಲ್ಕ ಪಡೆಯಲು ಹಾಗೂ Makeup ತರಗತಿಗಳನ್ನು ನಡೆಸಿ (ಅವಶ್ಯವಿದ್ದಲ್ಲಿ ವಿಶೇಷ ತರಗತಿಗಳನ್ನು ನಡೆಸಿ) Makeup CIE ಕಿರು ಪರೀಕ್ಷೆಗಳನ್ನು ಜರುಗಿಸುವ ಕುರಿತು ವೇಳಾಪಟ್ಟಿ ಸಹಿತ ಸಂಬಂಧಪಟ್ಟ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ ಪೂರ್ಣ ಮಾಹಿತಿ ನೀಡಲಾಗಿತ್ತು.

ಮುಂದುವರೆದು, ಮೇ 2025 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳ ಮೌಲ್ಯಮಾಪನ ಕಾರ್ಯಗಳು ಜರುಗುತ್ತಿರುವ ಕಾರಣ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ **ಜೂನ್ 2025 Makeup ಕಿರುಪರೀಕ್ಷೆ (CIE) ಗಳಿಗೆ ನೋಂದಾಯಿಸುವ ವಿದ್ಯಾರ್ಥಿಗಳಿಂದ "June-2025 Makeup Exam" ಅರ್ಜಿ ನಮೂನೆಯೊಂದಿಗೆ ಪರೀಕ್ಷಾ ಶುಲ್ಕವನ್ನು ದಿನಾಂಕ:10.06.2025 ರವರೆಗೆ** ಪಡೆಯುವಂತ ಹಾಗೂ ಈ ಕೆಳಕಂಡ ವೇಳಾಪಟ್ಟಿಯಂತೆ Makeup ತರಗತಿಗಳನ್ನು ನಡೆಸಿ (ಅವಶ್ಯವಿದ್ದಲ್ಲಿ ವಿಶೇಷ ತರಗತಿಗಳನ್ನು ನಡೆಸಿ) Makeup CIE ಕಿರು ಪರೀಕ್ಷೆಗಳನ್ನು ಈ ಕೆಳಕಂಡ ವೇಳಾಪಟ್ಟಿಯಂತೆ ಜರುಗಿಸಲು ತಿಳಿಸಲಾಗಿದೆ.

| ಸೆಮಿಸ್ಟರ್ | Makeup ತರಗತಿಗಳು | Makeup CIE ಕಿರು ಪರೀಕ್ಷೆಗಳು | ಆಂ. ಅಂಕಗಳ ಪರಿಶೀಲನೆ & ವೆಬ್ ಪೋರ್ಟಲ್ ನಲ್ಲಿ ಅಪ್ ಲೋಡ್ ಮಾಡುವುದು |
|---|---|---|---|
| **1,2,3,4 & 5ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ** | **03/06/2025 ರಿಂದ 12/06/2025 ರವರೆಗೆ** | **14/06/2025 ರಿಂದ 23/06/2025 ರವರೆಗೆ** | **25/06/2025** |

ಮುಂದುವರೆದು ಏಪ್ರಿಲ್/ಮೇ 2025ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳ ಆಂತರಿಕ ಅಂಕಗಳ ಪರಿವೀಕ್ಷಕರೇ 2025 Makeup CIE ಆಂತರಿಕ ಅಂಕಗಳನ್ನು ಪರಿಶೀಲಿಸುವರು ಹಾಗೂ ಪೂರ್ಣ ವರದಿಯನ್ನು ಪ್ರಿನ್ಸಿಪಾಲರು ದಿನಾಂಕ:27.06.2025 ರೊಳಗೆ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ತಪ್ಪದೆ ಸಲ್ಲಿಸಲು ಸೂಚಿಸಲಾಗಿದೆ.

**ವಿಶೇಷ ಸೂಚನೆ: ಈಗಾಗಲೇ ಜೂನ್ 2025 Makeup ಕಿರುಪರೀಕ್ಷೆ (CIE) ಗಳಿಗೆ ನೋಂದಾಯಿಸುವ ವಿದ್ಯಾರ್ಥಿಗಳು, ಏಪ್ರಿಲ್/ಮೇ 2025 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷಾ ಫಲಿತಾಂಶ ಪ್ರಕಟಣೆ ನಂತರ 1 ರಿಂದ 6ನೇ ಸೆಮಿಸ್ಟರ್ ಗಳ ವಿವಿಧ ಥಿಯರಿ ಹಾಗು ಪ್ರಾಯೋಗಿಕ ಕೋರ್ಸ್ (Subjects) ಗಳಲ್ಲಿ ಅನುತ್ತೀರ್ಣಗೊಳ್ಳುವ ವಿಷಯಗಳಿಗೆ ಜುಲೈ 2025 ರ Makeup SEE ಪರೀಕ್ಷೆಗೆ ನೋಂದಾಯಿಸಿಕೊಳ್ಳಲು ಸಂಬಂಧಪಟ್ಟ ಸೆಮಿಸ್ಟರ್ ನ ಪರೀಕ್ಷಾ ಶುಲ್ಕ ವ್ಯತ್ಯಾಸದ ಮೊತ್ತವನ್ನು ಸರಿದೂಗಿಸಿ ಕಡ್ಡಾಯವಾಗಿ ಪಾವತಿಸಬೇಕಾಗಿರುತ್ತದೆ.**

ಕಾರ್ಯದರ್ಶಿ

ಇವರಿಗೆ:
ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರುಗಳಿಗೆ – ಮುಂದಿನ ಕ್ರಮಕ್ಕಾಗಿ ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಗಮನಕ್ಕೆ ತರುವ ಸಲುವಾಗಿ.

ಪ್ರತಿ: 1. ನಿರ್ದೇಶಕರ ಆಪ್ತಶಾಖೆ 2. ಇ-ಆಡಳಿತ ವೆಬ್ ಸೈಟ್ ನಲ್ಲಿ ಪ್ರಕಟಿಸಲು 3. ಇಎಪಿ ವಿಭಾಗಕ್ಕೆ-ಮಾಹಿತಿಗಾಗಿ
4. ಗಣಕ ಕೇಂದ್ರ-ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು
5. ಏಪ್ರಿಲ್/ ಮೇ 2025ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ ಸಂಬಂಧಪಟ್ಟ ಪ್ರಿನ್ಸಿಪಾಲರುಗಳ ಮುಖಾಂತರ- ಅಗತ್ಯ ಕ್ರಮಕ್ಕಾಗಿ